(ದಿನಾಂಕಃ **30.09.2024** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಡಿ.ಎನ್.ಹೆಚ್ ರವರಿಂದ ಃ–**

1. ನನ್ನ ತಂದೆಯ ಹೆಸರು ಅಮ್ಲಾಡಿ ಲಕ್ಷ್ಮೀನಾರಣ ಭಟ್ಟ ಎಂದು ಸೂಚಿಸಿದರೆ ಸರಿ. ನನ್ನ ತಂದೆ ತಾಯಿ ಮರಣ ಹೊಂದಿರುತ್ತಾರೆ ಎಂದು ಸೂಚಿಸಿದರೆ ಸರಿ.

2. ವಾದಿ ನನ್ನ ಸಹೋದರನಾಗಬೇಕು ಎಂದರೆ ಸರಿ. ನಾನು ಒಟ್ಟು 5 ಜನ ಅಣ್ಣ ತಮ್ಮಂದಿರು ಇರುತ್ತೇವೆ.

3. ದಿನಾಂಕಃ 21.04.1978 ರಲ್ಲಿ ನಮ್ಮ ಕುಟುಬಂದ ಸದಸ್ಯರು ವಿಬಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

4. ಸದರಿ ವಿಭಾಗ ಪತ್ರದಲ್ಲಿ ನಮ್ಮ ಕುಟುಬಂಕ್ಕೆ ಸೇರಿದ ಹಳೆ ವಾಸದ ಮನೆ ಮತ್ತು ಅದಕ್ಕೆ ಲಗತ್ತಿಸಿದ ಜಾನುವಾರು ಕೊಟ್ಟಿಗೆ ಮತ್ತು ಸದರಿ ಮನೆಯ ಪೂರ್ವ ದಿಕ್ಕಿನಲ್ಲಿರುವ ಸರ್ವೆ ನಂ 92 ಮತ್ತು ಸರ್ವೆ ನಂ 93 ರಲ್ಲಿ ಅಡಿಕೆ ತೊಟದ ಜಮೀನು ಕೊಟ್ಟಿರುತ್ತೇವೆ ಎಂದರೆ ಸರಿ.

5. ಅದೇ ರೀತಿ ನನಗೂ ಮತ್ತು ವಾದಿಗೂ ಮತ್ತು ಇತರ ನನ್ನ ಸಹೋದರರಿಗೂ ಜಮೀನು ಹಂಚಿಗೆ ಮಾಡಿರುತ್ತಾರೆ ಎಂದರೆ ಸರಿ.

6. ನಾನು ನನಗೆ ಸೇರಿದ ಜಮೀನಿನ ಪಶ್ಚಿಮ ಭಾಗದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತೇನೆ ಎಂದರೆ ಸರಿ. ನನ್ನ ಉಳಿದ ಸಹೋದರರು ಅವರ ಜವೀನಿನಲ್ಲಿ ನನ್ನಿಂದ ಸ್ವಲ್ಪ ದೂರದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ.

7. ನನ್ನ ತಂದೆಗೆ ಹೋದ ಹಿಸ್ಸಾ ಜವೀನುಗಳನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ವಾದಿಯವರು ಸದರಿ ಕ್ರಯ ಪಡೆದ ದಿನದಿಂದ ಇಲ್ಲಿಯವರೆಗೆ ಸ್ವಾಧಿನವನ್ನು ಹೊಂದಿರುತ್ತಾರೆ ಎಂದರೆ ಸರಿ.

8. ನಮ್ಮ ಜಮೀನುಗಳಲ್ಲಿ ಉತ್ತರದಿಂದ ದಿಕ್ಷಿಣಕ್ಕೆ ನಿರು ಹರಿಯುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಕ್ಷಿಣ ದಿಂದ ಉತ್ತರಕ್ಕೆ ಹರಿಯುತ್ತದೆ ಎಂದು ನುಡಿಯುತ್ತಾರೆ.

9. ಮಂಜಗಳಲೆ ಗ್ರಾಮದ ಸರ್ವೆ ನಂ 81 ವೆಂಕಟರಮಣಯ್ಯ ರವರಿಗೆ ಸೇರಿರುತ್ತದೆ. ಸದರಿಯವರು ಈಗ ಇರುವುದಿಲ್ಲ.

10. ಸರ್ವೆ ನಂ 81 ಒಟ್ಟು ವಿಸ್ತಿರ್ಣ 1 ಎಕರೆ 9 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಈಗ ದೇವಕಿಯಮ್ಮ, ಮಂಜಯ್ಯ, ಲಕ್ಷ್ಮೀನಾರಾಯಣ ಮತ್ತು ಚಂದ್ರಶೇಖರ್ ರವರು ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ.

11. ನಾನು ಸರ್ವೆ ನಂ 81 ಅನ್ನು ಬಾಲ್ಯದಿಂದ ನೋಡಿರುತ್ತೇನೆ ಎಂದರೆ ಸರಿ. ಸರ್ವೆ ನಂ 81 ರಲ್ಲಿ ನಮ್ಮ ಪೂರ್ವಜರ ಕಾಲದಿಂದ ನೀರಿನ ಹೊಂಡ ಇತ್ತು ಎಂದರೆ ಸರಿ.

12. ನಮ್ಮ ಬಾಲ್ಯದ ಸಮಯದಲ್ಲಿ ನಮ್ಮ ಊರು ನಿರಾವರಿ ಜಮೀನು ಮತ್ತು ಬೆಳೆಗಳು ಬೆಳೆಯುವ ಸಮೃದ್ಧ ಭೂ ಆಗಿರುತ್ತದೆ ಬೇಸಿಗೆಯಲ್ಲೂ ನೀರು ಹರಿಯುತ್ತಿತ್ತು ಎಂದರೆ ಸರಿ.

13. ನಂತರ ದಿನಗಳಲ್ಲಿ ನಮ್ಮ ಊರಿನಲ್ಲಿ ಮಳೆ ಮತ್ತು ಬೆಳೆ ಕಡಿಮೆ ಆಗಿರುತ್ತದೆ ಎಂದರೆ ಸರಿ. ನನಗೂ ಮತ್ತು ವಾದಿಯವರಿಗೆ ಕುಡಿಯುವ ನೀರಿಗಾಗಿ ಬಾವಿಯ ವ್ಯವಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ.

14. ನಾನು ಮತ್ತು ವಾದಿಯವರು ಪ್ರತ್ಯೇಕವಾದ ಬಾವಿಗಳನ್ನು ತಮ್ಮ ತಮ್ಮ ಜಾಗದಲ್ಲಿ ಹೊಂದಿರುತ್ತೇವೆ. ನಾನು ಬಾವಿಗಳು ಇರುವುದರ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ.

15. ವಾದಿಯವರಿಗೆ ಬಾವಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಾಯಕ್ಕೆ ಬಂದ ನಂತರ ಸರ್ವೆ ನಂ 81 ರಲ್ಲಿರುವ ನೀರಿನ ಹೊಂಡವನ್ನು ಅಗಲ ಮಾಡಿಸಿರುತ್ತೇವೆ ಎಂದರೆ ಸರಿ.

16. ಸರ್ವೆ ನಂ 81 ರಲ್ಲಿ ಈಗಲೂ ಸಹ ನೀರಿನ ಹೊಂಡ ಇರುತ್ತದೆ ಎಂದು ಸೂಚಿಸಿದರೆ ಸರಿ. ಸದರಿ ಹೊಂಡದ ನೀರು ಸರ್ವೆ ನಂ 81, 85, 86, 87 ರಿಂದ 90 ರ ವರೆಗೆ ಹರಿದು ಹೊಗುತ್ತದೆ ಎಂದರೆ ಸರಿಯಲ್ಲ.

17. ನನ್ನ ಜಮೀನುಗಳಿಗೆ ಸದರಿ ಹೊಂಡದಿಂದ ನೀರು ಸದರಿ ಜವೀನುಗಳ ಮೂಲಕ ಹರಿದು ಬರುತ್ತದೆ ಎಂದರೆ ಸರಿಯಲ್ಲ.

18. ಸರ್ವೆ ನಂ 81 ರಲ್ಲಿರುವ ನೀರಿನ ಹೊಂಡ 100 ಅಡಿ ಉದ್ದ, 6 ಅಡಿ ಆಳ ಮತ್ತು 25 ಅಡಿ ಆಗಲಾವಾಗಿರುತ್ತದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ.

19. ಸದರಿ ನೀರಿದ ಹೊಂಡದಿಂದ 30 ಅಡಿ ಹರಿಯುವ ನೀರಿನ ಕಾಲುವೆ ಇರುತ್ತದೆ ಎಂದರೆ ಸರಿಯಲ್ಲ.

20. ಸರ್ವೆ ನಂ 91 ವಾದಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ಸದರಿ ಸರ್ವೆ ನಂ 91 ರಲ್ಲಿ ನನಗೆ 13 ಗುಂಟೆ ಮತ್ತು ವಾದಿಗೆ 4 ಗುಂಟೆ ಪಾಲು ಇರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಸದರಿ ಜಮೀನಿನಲ್ಲಿ ಒಂದು ಸಣ್ಣದಾದ ನೀರಿನ ಟ್ಯಾಂಕ್ ಹೊಂದಿರುತ್ತೇನೆ ಎಂದರೆ ಸರಿ.

21. ಸದರಿ ಸರ್ವೆ ನಂ 81 ರ ನೀರಿನ ಹೊಂಡದಿಂದ ಸರ್ವೆ ನಂ 91 ರಲ್ಲಿರುವ ನೀರಿನ ಟ್ಯಾಂಕ್ಗೆ ನೀರು ಬರುತ್ತದೆ ಎಂದರೆ ಸರಿಯಲ್ಲ.

22. ಸರ್ವೆ ನಂ 81 ರಲ್ಲಿ ಬರುವ ನೀರಿನ ಹೊಂಡದ ಪೂರ್ವ–ಪಶ್ಚಿಮಕ್ಕೆ ಸರ್ವೆ ನಂ 81 ರ ಉಳಿದ ಜಮೀನು ಬರುತ್ತದೆ ಎಂದರೆ ಸರಿ. ಉತ್ತರಕ್ಕೆ ಃ ಪೈಪ್ ಲೈನ್ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನೀರಿನ ಹೊಂಡಕ್ಕೆ ಉತ್ತರಕ್ಕೆ ಸರ್ವೆ ನಂ 81, 85, 86, 87 ರಿಂದ 91 ಸರ್ವೆ ಗಳು ಬರುತ್ತವೆ ಎಂದರೆ ಸರಿ.

23. ಸದರಿ ನೀರಿನ ಹೊಂಡದ ದಕ್ಷಿಣ ಬಾಗದ ಸರ್ವೆ ನಂ 81 ಮತ್ತು 82 ರ ಜವೀನುಗಳ ಉಳಿದ ಬಾಗ ಬರುತ್ತದೆ ಎಂದರೆ ಸಾಕ್ಷಿಯು ಬರಬಹುದು ಎಂದು ನುಡಿಯುತ್ತಾರೆ.

24. ಸರ್ವೆ ನಂ 91 ರಲ್ಲಿರುವ ಟ್ಯಾಂಕ್ ಸಿಮೆಂಟ್ ನಿಂದ ಕಟ್ಟಿದ ಟ್ಯಾಂಕ್ ಆಗಿರುತ್ತದೆ. ಸದರಿ ಟ್ಯಾಂಕ್ ನಿಂದ ಒಂದು ಪೈಪ್ ನನ್ನ ಮನೆಗೆ ಇನ್ನೊಂದು ಪೈಪ್ ವಾದಿಯವರ ಮನಗೆ ಹೊತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಎರಡು ಪೈಪ್ ಲೈನ್ ಇದ್ದು ಒಂದು ನನ್ನ ಮನೆಗೆ ಇನ್ನೊಂದು ಗೊಬ್ಬರ ಗುಂಡಿಗೆ ಬರುತತದೆ ಎಂದು ನುಡಿಯುತ್ತಾರೆ.

25. ನಾನು ಇನ್ನೊಂದು ಪೈಪ್ ಅನ್ನು ನನ್ನ ಗೊಬ್ಬರದ ಗುಂಡಿಗೆ ಉಪಯೋಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಟ್ಯಾಂಕ್ ನಿಂದ ಒಂದು ನೀರಿನ ಪೈಪ್ ಲೈನ್ ವಾದಿಯವರ ಮನಗೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಪೈಪ್ ಲೈನ್ ಹಾಕಲು ಪ್ರಯತ್ನಿಸಿರುತ್ತಿರುತ್ತಾರೆ.

26. ನಾನು ಸದರಿ ಪೈಪ್ ಲೈನ್ ಅನ್ನು ದುರುದ್ದೇಶದಿಂದ ಹಾಳು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಕಾರಣದಿಂದ ವಾದಿಯವರ ಮೇಲೆ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಷಯ ಮೇಲೆ ನನ್ನ ವಿರುದ್ಧ ಒಂದು ಕ್ರಿಮಿನಲ್ ಮೊಖದಮ್ಮೆ ನನ್ನ ಮೇಲೆ ಇರುತ್ತದೆ ಎಂದರೆ ಸರಿ.

27. ಸರ್ವೆ ನಂ 81 ರಲ್ಲಿರುವ ನೀರಿನ ಹೊಂಡದ ನೀರು ಆರೋಗ್ಯಕರವಾದ ನೀರು ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಪ್ರದೇಶದಲ್ಲಿ ಗುಡ್ಡ ಬೆಟ್ಟಗಳಿಂದ ನೀರು ಹರಿದು ಬರುತ್ತದೆ ಎಂದರೆ ಸರಿ.

28. ಸದರಿ ಗುಡ್ಡ ಬೆಟ್ಟದಿಂದ ಬರುವ ನೀರವನ್ನು ಪೈಪ್ ಗಳಿಗೆ ಜೊಡಿಸಿ ಮನೆಗಳಿಗೆ ಉಪಯೋಗಿಸುತ್ತಾರೆ ಎಂದರೆ ಸರಿ. ನಾನು ಮತ್ತು ವಾದಿಯವರು ಬೆಟ್ಟ ಗುಡ್ಡದಿಂದ ಬರುವ ನೀರನ್ನು ಉಪಯೋಗಿಸುವ ವ್ಯವಸ್ಥೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

29. ನಾವು ಯಾವುದೇ ಕಾಲದಿಂದಲೂ ಬೆಟ್ಟ ಗುಡ್ಡದಿಂದ ಬರುವ ನೀರನ್ನು ಉಪಯೋಗಿಸುತ್ತಿರುವುದಿಲ್ಲ ಎಂದರೆ ಸರಿ.

30. ನಾವು ಸರ್ವೆ ನಂ 91 ರಲ್ಲಿರುವ ನೀರಿನ ಹೊಂಡದಿಂದ ನೀರನ್ನು ಉಪಯೋಗಿಸುತ್ತೇವೆ ಎಂದರೆ ಸರಿಯಲ್ಲ.

31. ಸರ್ವೆ ನಂ 81 ರಲ್ಲಿರುವ ನೀರಿನ ಹೊಂಡ ನಕಾಶೆದಲ್ಲಿ ತೋರಿಸಿದ ನೀರಿನ ಹೊಂಡ ಆಗಿರುವುದಿಲ್ಲ ಎಂದರೆ ಸರಿಯಲ್ಲ.

32. ಸದರಿ ನೀರಿನ ಹೊಂಡ ನೀರಾವರಿ ಇಲಾಖೆಗೆ ಮತ್ತು ಅಂತರ ಜಲ ಅಭಿವೃದ್ದಿ ಉಪ ವಿಭಾಗಕ್ಕೆ ಬರುವುದಿಲ್ಲ ಎಂದು ಸಂಬಂಧಿಸಿದ ಅಧಿಕಾರಿಗಳು ನಿಪಿ2 ಅನ್ನು ಕೊಟ್ಟಿರುತ್ತಾರೆ ಎಂದರೆ ಸರಿ.

33. ನಾನು ಶಾಲೆಗೆ ಹೋಗಿರುವುದಿಲ್ಲ. ನಾನು ಖಾಸಗಿ ಶಿಕ್ಷಕರಿಂದ ಸ್ವಲ್ಪ ಮಟ್ಟಿಗೆ ವಿದ್ಯಾಭ್ಯಾಸವನ್ನು ಕಲಿತಿರುತ್ತೇನೆ ಎಂದು ನುಡಿಯುತ್ತಾರೆ.

34. ನಾನು ಈಗಲೂ ಕನ್ನಡ ಚೆನ್ನಾಗಿ ಓದಿ ಬರೆಯುತ್ತೇನೆ ಎಂದರೆ ಸರಿ. ನೀರಿನ ಹೊಂಡ ನಕಾಶೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

35. ಸರ್ವೆ ನಂ 81 ರಲ್ಲಿರುವ ನೀರಿನ ಹೊಂಡದಿಂದ ಸರ್ವೆ ನಂ 91 ರಲ್ಲಿರುವ ಟ್ಯಾಂಕ್ಗೆ ಪೈಪ್ ಲೈನ್ ಮತ್ತು ಸರ್ವೆ ನಂ 91 ರಲ್ಲಿರುವ ನೀರಿನ ಟ್ಯಾಂಕ್ ನಿಂದ ಎರಡು ಪೈಪ್ ಲೈನ್ ಒಂದು ನನ್ನ ಮನೆಗೆ ಒಂದು ವಾದಿಯವರ ಮನೆಗೆ ಹೊಗಲು ಇವತ್ತಿನವರೆಗೂ ಇರುತ್ತದೆ ಎಂದರೆ ಸಾಕ್ಷಿಯು ಸದರಿ ನೀರಿ ಹೊಂಡದಿಂದ ನೀರಿನ ಟ್ಯಾಂಕ್ಗೆ ಯಾವುದೇ ಪೈಪ್ ಲೈನ್ ಇರುವುದಿಲ್ಲ ಸರ್ವೆ ನಂ 91 ರಲ್ಲಿ ನೀರಿನ ಟ್ಯಾಂಕ್ ಇದ್ದು ಎರಡೂ ಪೈಪ್ ಲೈನ್ ಗಳು ನಮ್ಮ ಮನೆಗೆ ಹೊಗುತ್ತದೆ ಎಂದು ನುಡಿಯುತ್ತಾರೆ.

36. ನೀರಿನ ಹೊಂಡ ಇದ್ದದರ ಬಗ್ಗೆ ನಿಪಿ16 ರಿಂದ ನಿಪಿ31 ರ ವರೆಗೆ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ.

37. ವಾದಿಯವರು ತಮ್ಮ ಹಳೆಯ ಮನೆಯನ್ನು ಕೆವವಿ ಹೊಸ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ ಸಾಕ್ಷಿಯಿು ಮುಂದುವರಿದು ಸ್ವಲ್ಪ ಹಿಂದ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

38. ವಾದಿಯವರು ಹೊಸದಾಗಿ ಕಟ್ಟಿರುವ ಮನೆಗೂ ಮತ್ತು ಸರ್ವೆ ನಂ 91 ಮತ್ತು 92 ರ ಮಧ್ಯ ಸರ್ಕಾರಿ ಜಮೀನು ಇರುತ್ತದೆ ಎಂದರೆ ಸರಿ.

39. ಸದರಿ ಸರ್ಕಾರಿ ಜಮೀನಿನಲ್ಲಿರುವ ರಸ್ತೆ ಬೇಕು ಎಂದು ಗ್ರಾಮ ಪಂಚಾಯ್ತಿಗೆ ಅರ್ಜಿಯನ್ನು ಕೊಟ್ಟಿರುತ್ತೇನೇ ಎಂದರೆ ಸರಿ. ಸದರಿ ರಸ್ತೆಯ ಹಿನ್ನೆಲೆಯಿಂದ ನನ್ನ ಮತ್ತು ವಾದಿ ಯವರ ಮಧ್ಯ ಜಗಳ ಆಗಿರುವುದರಿಂದ ಈ ಸದರಿ ದಾವಾ ಆಸ್ತಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

40. ವಾದಿಗೆ ದಾವಾ ಸ್ವತ್ತಿನಿಂದ ನೀರನ್ನು ಉಪಯೋಗಿಸುವ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.